# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 17-03-2023

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
ಇ-ಮೇಲ್ :drsyndicateku@gmail.com
☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-1:ಸಿಂ-2:23: 13. :2023-24 ದಿನಾಂಕ:12-04-2023

ಮಾನ್ಯರೆ,

ವಿಷಯ: ದಿನಾಂಕ:17-03-2023 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು-2018 ಅಧ್ಯಾಯ-I ರ ಪ್ರಕರಣ- 22.(i) ರನ್ವಯ ದಿನಾಂಕ:17-03-2023 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ಸದರಿ ನಡಾವಳಿಯು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ./ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:17-03-2023 ರಂದು ಶುಕ್ರವಾರ ಪೂರ್ವಾಹ್ನ :11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ <u>ಸಾಮಾನ್ಯ ಸಿಂಡಿಕೇಟ್ ಸಭೆ</u>"ಯ ನಡಾವಳಿಗಳು.**

**<u>ಹಾಜರಾದ ಸದಸ್ಯರು:</u>**

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಗೀತಾ ಸಿ., ಕುಲಸಚಿವರು (ಪ್ರಭಾರ) | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 5. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 6. | ಪ್ರೊ. ಗೀತಾ ಸಿ. ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 7. | ಶ್ರೀ ವಿನಯ್‌ಕುಮಾರ್ ಶೆಟ್ಟಿ., ಪ್ರಾಂಶುಪಾಲರು, | ಸದಸ್ಯರು |
| 8. | ಡಾ. ಎ.ಟಿ. ಪದ್ಮೇಗೌಡ., ಪ್ರಾಂಶುಪಾಲರು, | ಸದಸ್ಯರು |
| 9. | ಡಾ. ಎಂ. ಸ್ವಾಮಿ., ಪ್ರಾಂಶುಪಾಲರು, | ಸದಸ್ಯರು |
| 10. | ಡಾ. ಸಂಧ್ಯಾ ಕಾವೇರಿ ಕೆ., ಪ್ರಾಂಶುಪಾಲರು | ಸದಸ್ಯರು |

**<u>ಗೈರುಹಾಜರಾದ ಸದಸ್ಯರು:</u>**

| | | |
|---|---|---|
| 1. | ಶ್ರೀ ಓಂ ಪ್ರಕಾಶ್ ರಾಜೋಳೆ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**<u>ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:</u>**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ನೂತನವಾಗಿ ಕುಲಸಚಿವ (ಆಡಳಿತ) ಹುದ್ದೆಗೆ ನೇಮಕಗೊಂಡ ಪ್ರೊ.ಗೀತಾ, ಸಿ., ಹಿರಿಯ ಡೀನರು, ಶಿಕ್ಷಣ ನಿಕಾಯ ಮತ್ತು ಹಣಕಾಸು ಅಧಿಕಾರಿಯಾಗಿ ನೇಮಕವಾದ ಪ್ರೊ.ವೈ.ಎಲ್.ರಾಮಚಂದ್ರ, ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ಹಾಗೂ ನೂತನವಾಗಿ ಸಿಂಡಿಕೇಟ್ ಸದಸ್ಯರಾಗಿ ನೇಮಕ ಮಾಡಲಾದ ಡಾ.ಸಂಧ್ಯಾ ಕಾವೇರಿ, ಕೆ., ಪ್ರಾಂಶುಪಾಲರು, ಕಟೀಲ್ ಅಶೋಕಪೈ ಸ್ಮಾರಕ ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ ಇವರುಗಳನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಕುಲಸಚಿವರಾದ ಪ್ರೊ.ಗೀತಾ, ಸಿ., ಇವರು ಮಾತನಾಡುತ್ತಾ, ನಾನು ಕಳೆದ ತಿಂಗಳು ಕುಲಸಚಿವ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಪಾರದರ್ಶಕ ಹಾಗೂ ಪ್ರಾಮಾಣಿಕ ಆಡಳಿತ ನೀಡಲು ಪ್ರಯತ್ನಿಸುತ್ತೇನೆ, ಇದಕ್ಕೆ ಎಲ್ಲಾ ಸದಸ್ಯರು ಸಹಕಾರ ನೀಡಬೇಕೆಂದರು. ಡಾ.ಸಂಧ್ಯಾ ಕಾವೇರಿ, ಕೆ.,ರವರು ಮಾತನಾಡಿ, ಸಿಂಡಿಕೇಟ್ ಸದಸ್ಯರಾಗಿ ನೇಮಕ ಮಾಡಿರುವುದಕ್ಕೆ ಧನ್ಯವಾದ ತಿಳಿಸುತ್ತಾ, ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಪ್ರತಿ 45 ದಿನಗಳಿಗೊಮ್ಮೆ ಸಿಂಡಿಕೇಟ್ ಸಭೆ ನಡೆಯಬೇಕು. ಆದರೆ, ಈ ವರ್ಷದಲ್ಲಿ 60 ದಿನಗಳ ಅವಧಿಯಲ್ಲಿ ಸಭೆಗಳು ನಡೆಯುತ್ತಿವೆ. ಆದುದರಿಂದ, ವಿಶ್ವವಿದ್ಯಾಲಯದ ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕಾರ 45 ದಿನಗಳಿಗೆ ಒಂದು ಸಭೆಯನ್ನು ನಡೆಸಲು ನೂತನವಾಗಿ ನೇಮಕಗೊಂಡ ಕುಲಸಚಿವರು ಪ್ರಯತ್ನಿಸಬೇಕೆಂದರು. ಮುಂದುವರೆದು ಮಾತನಾಡಿದ ಅವರು ಇತ್ತೀಚೆಗೆ

ಘನತೆವೆತ್ತ ಕುಲಾಧಿಪತಿಗಳು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆ ನಡೆಸಿದ್ದು, ಇದರಲ್ಲಿ ಹೊಸ ಶಿಕ್ಷಣ ನೀತಿಯ ಅನುಷ್ಠಾನದ ಕುರಿತು ಚರ್ಚಿಸಲಾಯಿತು. ಕುಲಪತಿಗಳು ಹೊಸ ಶಿಕ್ಷಣ ನೀತಿ ಹಾಗೂ ಯು.ಯು.ಸಿ.ಎಂ.ಸ್., ಸಾಫ್ಟ್‌ವೇರ್ ಅನುಷ್ಠಾನದಿಂದ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರು. ಸಭೆಯಲ್ಲಿ ವಿಶ್ವವಿದ್ಯಾಲಯಗಳ ಪ್ರಮುಖ ಸಮಸ್ಯೆಗಳ ಕುರಿತು ಅವಲೋಕನ ಮಾಡುತ್ತಾ, ನಿವೃತ್ತಿಯಿಂದ ತೆರವಾಗುತ್ತಿರುವ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರ ಹುದ್ದೆಗಳಿಗೆ ನೇಮಕಾತಿಯಾಗದ ಕಾರಣದಿಂದಾಗುತ್ತಿರುವ ತೊಂದರೆಗಳು, ಹಣಕಾಸಿನ ಕೊರತೆಗಳ ಕುರಿತು ಗಮನ ಸೆಳೆಯಲಾಯಿತು. ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ಬಗ್ಗೆ ಉನ್ನತ ಶಿಕ್ಷಣ ಇಲಾಖೆಯು ಗಮನ ಹರಿಸುವಂತೆ ಘನತೆವೆತ್ತ ಕುಲಾಧಿಪತಿಗಳು ಸಲಹೆ ನೀಡಿದರು ಎಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿ ಹಾಗೂ ಶ್ರೀ ಎನ್.ಆರ್.ಮಂಜುನಾಥರವರು ಮಾತನಾಡಿ, ಇಂದು ಬೆಳಿಗ್ಗೆ ವಿಶ್ವವಿದ್ಯಾಲಯದ ಕೆಲವು ಅಧ್ಯಾಪಕೇತರ ನೌಕರರು ನಮ್ಮನ್ನು ಭೇಟಿಯಾಗಿ ಇತ್ತೀಚೆಗೆ ಹಲವಾರು ನೌಕರರನ್ನು ಆಂತರಿಕ ಬದಲಾವಣೆ/ವರ್ಗಾವಣೆ ಮಾಡಿರುವ ಕುರಿತಂತೆ ಪ್ರಸ್ತಾಪಿಸಿದಾಗ, ಕುಲಪತಿಯವರು ಮಾಹಿತಿ ನೀಡುತ್ತಾ, ವರ್ಗಾವಣೆಯು ಬಹಳ ದಿನಗಳಿಂದಲೂ ನೆನೆಗುದಿಗೆ ಬಿದ್ದಿತ್ತು. ಆಗಾಗ್ಗೆ ವರ್ಗಾವಣೆಗಳಾಗದಿದ್ದಲ್ಲಿ ನೌಕರರಲ್ಲಿ ಜಡತ್ವ ಬರುತ್ತದೆ. ಆಡಳಿತದಲ್ಲಿ ದಕ್ಷತೆ ಕಡಿಮೆಯಾಗುತ್ತದೆ. ಹಿಂದಿನ ಇಬ್ಬರು ಕುಲಸಚಿವರಿಗೆ ಹಲವಾರು ಬಾರಿ ತಿಳಿಸಿದರೂ ಅವರು ವರ್ಗಾವಣೆಗೆ ಕ್ರಮ ಕೈಗೊಳ್ಳಲಿಲ್ಲ. ಆಂತರಿಕ ಬದಲಾವಣೆಯನ್ನು ಆಡಳಿತ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಲಾಗಿದೆ. ಬಹಳ ದಿನಗಳಿಂದ ಆಂತರಿಕ ಬದಲಾವಣೆ/ವರ್ಗಾವಣೆ ಮಾಡದ ಕುರಿತಾಗಿ ಹಲವಾರು ದೂರುಗಳು ಬಂದಿದ್ದು, ಈ ಬಗ್ಗೆ ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಕೂಡ ಚರ್ಚಿಸಲಾಗಿದೆ ವಿಶ್ವವಿದ್ಯಾಲಯದ ಶೈಕ್ಷಣಿಕ ಅಭಿವೃದ್ಧಿ ಹಾಗೂ ಆಡಳಿತದಲ್ಲಿ ಚುರುಕುತನ ತರುವಲ್ಲಿ ಆಂತರಿಕ ಬದಲಾವಣೆ ಅನಿವಾರ್ಯವಾಗಿದ್ದರಿಂದ ಹಾಗೂ ಸಧ್ಯದಲ್ಲಿಯೇ ಚುನಾವಣಾ ನೀತಿ ಸಂಹಿತೆ ಜಾರಿಯಾದಲ್ಲಿ ಯಾವುದೇ ಆಂತರಿಕ ಬದಲಾವಣೆ/ವರ್ಗಾವಣೆ ಮಾಡಲು ಅವಕಾಶವಿಲ್ಲವಾದ್ದರಿಂದ 83 ನೌಕರರನ್ನು ಆಂತರಿಕ ಬದಲಾವಣೆ/ವರ್ಗಾವಣೆಗೊಳಿಸಿದೆ ಎಂದರು.

ಕುಲಸಚಿವರು (ಮೌಲ್ಯಮಾಪನ)ರವರು ಮಾತನಾಡಿ, ಪರೀಕ್ಷಾ ವಿಭಾಗದಲ್ಲಿ ಹೊಸ ಶಿಕ್ಷಣ ನೀತಿಯ ಪರೀಕ್ಷೆಯ ಕೆಲಸಗಳು ಹಾಗೂ 33ನೇ ವಾರ್ಷಿಕ ಘಟಿಕೋತ್ಸವದ ಸಿದ್ಧತೆಗಳು ನಡೆಯುತ್ತಿವೆ. ಮಾರ್ಚ್ ಅಂತ್ಯದೊಳಗೆ ವೆಚ್ಚದ ಬಿಲ್ಲುಗಳು ಲೆಕ್ಕ ತೀರುವಳಿಯಾಗಬೇಕು. ದೂರ ಶಿಕ್ಷಣ ನಿರ್ದೇಶನಾಲಯದ ಕೆಲಸಕಾರ್ಯಗಳು ಕೂಡ ಸ್ಟ್ರೀಮ್‌ಲೈನ್‌ಗೆ ಬಂದಿತ್ತು. ಈ ಹಂತದಲ್ಲಿ ವರ್ಗಾವಣೆ ಅಗತ್ಯವಿರಲಿಲ್ಲ ಎಂದರು. ಸದಸ್ಯರಾದ ಶ್ರೀ ಎನ್.ಆರ್.ಮಂಜುನಾಥರವರು ಮಾತನಾಡಿ, ಕೆಲವು ನೌಕರರು ಒಂದೇ ವಿಭಾಗದಲ್ಲಿ ಬಹಳ ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದು, ಎಲ್ಲರೂ ಎಲ್ಲಾ ವಿಭಾಗಗಳಲ್ಲೂ ಕೆಲಸ ಮಾಡಬೇಕು ಎಂದರು.

ಕುಲಸಚಿವರು (ಆಡಳಿತ)ರವರು ಮಾಹಿತಿ ನೀಡಿ ಮಾತನಾಡುತ್ತಾ, ಈ ಹಿಂದೆ ಪರೀಕ್ಷಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುವ ಕೆಲವು ನೌಕರರನ್ನು ಪರೀಕ್ಷಾ ವಿಭಾಗಕ್ಕೆ ಆಂತರಿಕ ಬದಲಾವಣೆ ಮಾಡಿರುವುದರಿಂದ ಪರೀಕ್ಷಾ ಕಾರ್ಯಗಳಿಗೆ ತೊಂದರೆಯಾಗುವುದಿಲ್ಲ ಎಂದರು. ನಂತರ ಕಾರ್ಯಸೂಚಿಗಳನ್ನು ಕೈಗೆತ್ತಿಕೊಳ್ಳಲಾಯಿತು.

**ಪ್ರಾಧಿಕಾರ ವಿಭಾಗ**

2023–ಸಿಂ–2.01 ದಿನಾಂಕ:10–11–2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ:** ಪರಿಶೀಲನೆ ಹಾಗೂ ಚರ್ಚೆಯ ನಂತರ ದಿನಾಂಕ: 10–11–2022ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು.

**2023–ಸಿಂ–2.02** ದಿನಾಂಕ:09–12–2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ದಿನಾಂಕ:09–12–2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಿಸಲಾಯಿತು.

**2023-ಸಿಂ-2.03** ದಿನಾಂಕ:16-01-2023 ರಂದು ನಡೆದ ವಿಶೇಷ ಸಿಂಡಿಕೇಟ್ ಸಭಾ ನಡಾವಳಿಗಳ ದೃಢೀಕರಣ.

**ನಿರ್ಣಯ:** ಪರಿಶೀಲನೆ ಹಾಗೂ ಚರ್ಚೆಯ ನಂತರ ದಿನಾಂಕ: 16-01-2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯಗಳನ್ನು ಅನುಮೋದಿಸಿ ದೃಢೀಕರಿಸಲಾಯಿತು

**2023-ಸಿಂ-2.04** ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡುವ ಕುರಿತು.

**ನಿರ್ಣಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000ರ ಪ್ರಕರಣ-32(1)(N)ರನ್ವಯ ಸಿಂಡಿಕೇಟ್ ಸದಸ್ಯರಾದ ಶ್ರೀ ಬಿ. ನಿರಂಜನ ಮೂರ್ತಿ ಇವರನ್ನು ಸಿಂಡಿಕೇಟ್‌ನಿಂದ ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ಸರ್ವಾನುಮತದಿಂದ ನಾಮನಿರ್ದೇಶನ ಮಾಡಲಾಯಿತು.

ಮುಂದುವರೆದು, ವಿಶ್ವವಿದ್ಯಾಲಯದ ಖರೀದಿ ಸಮಿತಿಗೆ ಸಿಂಡಿಕೇಟ್ ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥರವರನ್ನು ನೇಮಕ ಮಾಡಲು ನಿರ್ಣಯಿಸಲಾಯಿತು.

**2023-ಸಿಂ-2.05** ಸ್ನಾತಕ/ಸ್ನಾತಕೋತ್ತರ ಅಧ್ಯಯನ ಮಂಡಳಿ ಪುನರ್ ರಚನೆ ಕುರಿತು.

**ಚರ್ಚೆ:** ತುರ್ತು ಅಗತ್ಯವಿದ್ದುದ್ದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ರಚಿಸಲಾದ ಈ ಕೆಳಕಂಡ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಗಳನ್ನು ರಚಿಸಲಾದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

1) ಸ್ನಾತಕೋತ್ತರ ಕನ್ನಡ ಅಧ್ಯಯನ ಮಂಡಳಿಯ ಪುನರ್ ರಚನೆ
2) ಸ್ನಾತಕೋತ್ತರ ಎಂ.ಎ. ಮಹಿಳಾ ಅಧ್ಯಯನ ಮಂಡಳಿಯ ಪುನರ್ ರಚನೆ
3) ಸ್ನಾತಕ ಮತ್ತು ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಂವಹನ (ಸಂಯುಕ್ತ) ಅಧ್ಯಯನ ಮಂಡಳಿಯ ಪುನರ್ ರಚನೆ.
4) ಸ್ನಾತಕ ಜೀವರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ ರಚನೆ
5) ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ ರಚನೆ
6) ಸ್ನಾತಕೋತ್ತರ ಎಂ.ಬಿ.ಎ. ಅಧ್ಯಯನ ಮಂಡಳಿಯ ಪುನರ್ ರಚನೆ
7) ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ ರಚನೆ

ಮುಂದುವರೆದು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2)ರನ್ವಯ ಸ್ನಾತಕ ಶಿಕ್ಷಣ, ಸ್ನಾತಕೋತ್ತರ ಸಸ್ಯಶಾಸ್ತ್ರ ಹಾಗೂ ಸ್ನಾತಕೋತ್ತರ ಔಷಧೀಯ ರಸಾಯನಶಾಸ್ತ್ರ ಅಧ್ಯಯನ ಮಂಡಳಿಗಳನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**2023-ಸಿಂ-2.05(ಎ)** 33ನೇ ಘಟಿಕೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ 33ನೇ ವಾರ್ಷಿಕ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಕುರಿತು ಚರ್ಚಿಸಿ ಪಟ್ಟಿಯನ್ನು ಸಿದ್ಧಪಡಿಸಿ ಅನುಮೋದಿಸಲಾಯಿತು.

## ಪರೀಕ್ಷಾ ವಿಭಾಗ

**2023-ಸಿಂ-2.06** ದಿನಾಂಕ:07-02-2023 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

**ನಿರ್ಣಯ:** ಸೆಪ್ಟಂಬರ್/ಅಕ್ಟೋಬರ್ ಮತ್ತು ನವೆಂಬರ್–2022ರಲ್ಲಿ ನಡೆದ ಸ್ನಾತಕ ಪದವಿ ಹಾಗೂ ಬಿ.ಎಡ್., ಪದವಿ ಪರೀಕ್ಷೆಗಳಲ್ಲಿ ಅಕ್ರಮ ಎಸಗಿರುವ ವಿದ್ಯಾರ್ಥಿಗಳಿಗೆ ನಿಯಮಾನುಸಾರ ದಿನಾಂಕ: 07–02–2023ರಂದು ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿ ನಡೆದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯಲ್ಲಿ, ವಿಚಾರಣೆ ನಡೆಸಿ, ತಪ್ಪಿತಸ್ಥ 93 ವಿದ್ಯಾರ್ಥಿಗಳಿಗೆ ದಂಡನೆ ವಿಧಿಸಲಾಗಿದ್ದು, ಸದರಿ ವಿದ್ಯಾರ್ಥಿಗಳಿಗೆ ಮುಂದಿನ ಪರೀಕ್ಷೆ ತೆಗೆದುಕೊಳ್ಳಲು ಅನುಕೂಲವಾಗುವಂತೆ ಸಮಿತಿಯ ನಡಾವಳಿಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಯವರ ಅನುಮೋದನೆ ಪಡೆದುಕೊಂಡು ನಿರ್ಣಯ ಪತ್ರಗಳನ್ನು ಜಾರಿಗೊಳಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಅನುಮೋದಿಸಿ ಸ್ಥಿರೀಕರಿಸಲಾಯಿತು.

**2023–ಸಿಂ–2.07** ಸ್ನಾತಕ ಪದವಿ ರಾಷ್ಟ್ರೀಯ ಶಿಕ್ಷಣ ನೀತಿಯಡಿ (NEP) ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕವನ್ನು ಪರಿಷ್ಕರಿಸುವ ಕುರಿತು.

**ಚರ್ಚೆ:** ಕುಲಸಚಿವರು (ಮೌಲ್ಯಮಾಪನ)ರವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯವು ಸ್ನಾತಕ ಪದವಿಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ (NEP) ನಿಗದಿಪಡಿಸಿರುವ ಪರೀಕ್ಷಾ ಶುಲ್ಕವು ಅಧಿಕವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತಿದ್ದು, ಶುಲ್ಕವನ್ನು ಕಡಿಮೆ ಮಾಡುವಂತೆ ವಿದ್ಯಾರ್ಥಿ ಸಂಘಟನೆಗಳು ಸಲ್ಲಿಸಿದ್ದ ಮನವಿಯನ್ನು ಪರಿಶೀಲಿಸಿದ ಡೀನರುಗಳ ಸಮಿತಿಯು ರಾಜ್ಯದ ಇತರೆ ವಿಶ್ವವಿದ್ಯಾಲಯಗಳಲ್ಲಿನ ಶುಲ್ಕಗಳನ್ನು ಪರಾಮರ್ಶಿಸಿ, ಪ್ರಸ್ತುತ ಇರುವ ಪರೀಕ್ಷಾ ಶುಲ್ಕದಲ್ಲಿ ಶೇ.15ರಷ್ಟು ಕಡಿತಗೊಳಿಸಲು ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು. ಸದಸ್ಯರಾದ ಡಾ.ಸಂಧ್ಯಾಕಾವೇರಿರವರು ಮಾತನಾಡಿ, ಶುಲ್ಕವು ಅಧಿಕವಾಗಿದ್ದು, ಕಡಿತಗೊಳಿಸಲು ವಿಶ್ವವಿದ್ಯಾಲಯವು ಕ್ರಮ ಕೈಗೊಂಡಿರುವುದು ಅಭಿನಂದನಾರ್ಹವಾದುದು ಎಂದರು. ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಹಣಕಾಸು ಅಧಿಕಾರಿಗಳು ಮಾತನಾಡಿ, ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲ ಕಡಿಮೆಯಾಗಿದ್ದು, ವೆಚ್ಚಗಳು ಅಧಿಕವಾಗಿದೆ. ಅಲ್ಲದೆ, ದಿನಾಂಕ:15–03–2023 ರಂದು ಬೆಂಗಳೂರಿನಲ್ಲಿ ನಡೆದ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಸಭೆಯಲ್ಲಿ ಭಾಗವಹಿಸಿದ್ದ ಸರ್ಕಾರದ ಪ್ರತಿನಿಧಿಗಳು ಯಾವುದೇ ಶುಲ್ಕಗಳನ್ನು ಕಡಿತಗೊಳಿಸಬಾರದು ಎಂದು ತಿಳಿಸಿದ್ದಾರೆ. ಆದುದರಿಂದ, ವಿಶ್ವವಿದ್ಯಾಲಯದ ಅಭಿವೃದ್ಧಿಯ ದೃಷ್ಟಿಯಿಂದ ಶುಲ್ಕ ಕಡಿತಗೊಳಿಸುವ ವಿಷಯವನ್ನು ಪುನರ್ ಪರಿಶೀಲಿಸಬೇಕೆಂದರು. ಕುಲಸಚಿವರು (ಮೌಲ್ಯಮಾಪನ) ರವರು ಮಾತನಾಡಿ, ಪ್ರಸ್ತುತ ಸರ್ಕಾರವು ರಾಜ್ಯದಾದ್ಯಂತ ಏಕರೂಪದ ಶುಲ್ಕ ನಿಗದಿ ಮಾಡಲು ಕ್ರಮ ಕೈಗೊಂಡಿರುತ್ತದೆ. ಏಕರೂಪದ ಶುಲ್ಕವು ಸರ್ಕಾರದಿಂದ ನಿಗದಿಯಾಗುವವರೆಗೆ ಡೀನರುಗಳ ಸಮಿತಿಯ ಶಿಫಾರಸ್ಸಿನಂತೆ ಶುಲ್ಕವನ್ನು ಕಡಿತಗೊಳಿಸಬಹುದು ಎಂದರು. ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ಡೀನರುಗಳ ಸಮಿತಿಯ ಶಿಫಾರಸ್ಸಿನ ಪ್ರಕಾರ ಸ್ನಾತಕ ಪದವಿಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ (NEP) ನಿಗದಿಪಡಿಸಿರುವ ಪರೀಕ್ಷಾ ಶುಲ್ಕದಲ್ಲಿ ಶೇ.15ರಷ್ಟು ಕಡಿತಗೊಳಿಸಲು ಸಭೆಯು ನಿರ್ಣಯಿಸಿತು.

**2023–ಸಿಂ–2.08** ಪರೀಕ್ಷಾ ವಿಭಾಗದ ಉತ್ತರ ಪತ್ರಿಕೆ ಖರೀದಿಗೆ ಸಂಬಂಧಪಟ್ಟ ಟೆಂಡರ್‌ನ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಅಗತ್ಯವಿರುವ ರಹಸ್ಯ ಮತ್ತು ರಕ್ಷಣಾತ್ಮಕ ಗುಣಗಳನ್ನು ಹಾಗೂ Multiple laset Printed bar codes and OM Printing ಒಳಗೊಂಡಿರುವ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಲು ಮೆ:ಡಾಟಾಕಾನ್ ಟೆಕ್ನಾಲಜೀಸ್ ಇಂಡಿಯಾ ಲಿ., ಬೆಂಗಳೂರು ಇವರು ಇ–ಟೆಂಡರ್ ಮೂಲಕ ಅರ್ಹಗೊಂಡಿದ್ದು, ಮುಂದಿನ ಪರೀಕ್ಷೆಗಳಿಗೆ ಉತ್ತರ ಪತ್ರಿಕೆಗಳ ತುರ್ತು ಅಗತ್ಯವಿದ್ದುದ್ದರಿಂದ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಯವರ ಅನುಮೋದನೆ ಪಡೆದುಕೊಂಡು, ಸರಬರಾಜು ಸಂಸ್ಥೆಯೊಂದಿಗೆ ಎರಡು ವರ್ಷಗಳ ಅವಧಿಗೆ ಅನ್ವಯವಾಗುವಂತೆ ದರ ಒಪ್ಪಂದದ ಕರಾರು ಮಾಡಿಕೊಂಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2023–ಸಿಂ–2.09** ಪರೀಕ್ಷಾ ವಿಭಾಗಕ್ಕೆ ಲೇಸರ್ ಕಲರ್ ಪ್ರಿಂಟರ್‌ನ್ನು ಖರೀದಿಸಿದ ಮೊತ್ತ ಪಾವತಿಸುವ ಸಂಬಂಧ ಅನುಮೋದನೆ ಕುರಿತು.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು (ಮೌಲ್ಯಮಾಪನ)ರವರು, ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ25ಶಾಸನ2019, ಬೆಂಗಳೂರು, ದಿನಾಂಕ:27-04-2020ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ 2020ರನ್ವಯ ಸರಕು ಮತ್ತು ಸೇವೆಗಳ ಸಂಗ್ರಹಣೆ ಮೌಲ್ಯದ ಮಿತಿಯನ್ನು ರೂ.1 ಲಕ್ಷದಿಂದ ರೂ.5 ಲಕ್ಷಗಳವರೆಗೆ ಪರಿಷ್ಕರಿಸಿ ಅಧಿಸೂಚಿಸಿದ್ದು, ಇದರನ್ವಯ ಪರೀಕ್ಷಾ ವಿಭಾಗಕ್ಕೆ ಅಗತ್ಯವಿದ್ದ, ಲೇಸರ್ ಕಲರ್ ಪ್ರಿಂಟರ್ (Monica Monolta Bizhulb C300i) ನ್ನು ಮೆ:ಗೆಲಾಕ್ಸಿ ಇಮೇಜಿಂಗ್ ಟೆಕ್ನಾಲಜೀಸ್, ಬೆಂಗಳೂರು ಇವರಿಂದ ಖರೀದಿಸಿದ ಬಾಬ್ತು ರೂ.4,18,900/- (ನಾಲ್ಕು ಲಕ್ಷದ ಹದಿನೆಂಟು ಸಾವಿರದ ಒಂಭೈನೂರು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಿದ್ದು, ಇದನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, ಪರೀಕ್ಷಾ ವಿಭಾಗಕ್ಕೆ ಅಗತ್ಯವಿದ್ದ, ಲೇಸರ್ ಕಲರ್ ಪ್ರಿಂಟರ್‌ನ್ನು ಮೆ:ಗೆಲಾಕ್ಸಿ ಇಮೇಜಿಂಗ್ ಟೆಕ್ನಾಲಜೀಸ್, ಬೆಂಗಳೂರು ಇವರಿಂದ ಖರೀದಿಸಿದ ಬಾಬ್ತು ರೂ.4,18,900/- (ನಾಲ್ಕು ಲಕ್ಷದ ಹದಿನೆಂಟು ಸಾವಿರದ ಒಂಭೈನೂರು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡಲು ಸಭೆಯು ನಿರ್ಣಯಿಸಿತು.

**2023–ಸಿಂ–2.10** ಕುವೆಂಪು ವಿಶ್ವವಿದ್ಯಾಲಯದಲ್ಲಿ ನೂತನ ಶಿಕ್ಷಣ ನೀತಿ ಮತ್ತು ಯು.ಯು.ಸಿ.ಎಂ.ಎಸ್. ತಂತ್ರಾಂಶ ಅಳವಡಿಕೆ ಹಿನ್ನೆಲೆಯಲ್ಲಿ ಪರೀಕ್ಷಾ ಕಾರ್ಯಗಳ ಭತ್ಯೆ / ಸಂಬಾವನೆ ದರಗಳನ್ನು ಪರಿಷ್ಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದಲ್ಲಿ ಸರ್ಕಾರದ ಆದೇಶದಂತೆ ನೂತನ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡಿದ್ದು, ಯು.ಯು.ಸಿ.ಎಂ.ಎಸ್., ತಂತ್ರಾಂಶದಡಿ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಕಾರ್ಯ ಸ್ವರೂಪ ಮತ್ತು ಸಿಬ್ಬಂದಿ ಮಾದರಿಗಳು ಮಾರ್ಪಾಡಾಗಿರುವುದರಿಂದ, ಸಿಬ್ಬಂದಿ ಮಾದರಿ ಹಾಗೂ ಕಾರ್ಯ ವ್ಯವಸ್ಥೆಗಳಿಗೆ ಅನುಗುಣವಾಗಿ ಸಂಭಾವನಾ ದರಗಳನ್ನು ಪರಿಷ್ಕರಿಸಲು ರಚಿಸಲಾಗಿದ್ದ ಸಮಿತಿಯ ಶಿಫಾರಸ್ಸಿನಂತೆ ಪರಿಷ್ಕೃತ ದರಗಳನ್ನು ಮಾನ್ಯ ಕುಲಪತಿಯವರ ಅನುಮೋದನೆ ಪಡೆದುಕೊಂಡು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಅಧಿಸೂಚಿತಗೊಳಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿತು.

**2023–ಸಿಂ–2.11** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿದೇಯಕ 2020ರನ್ನು ಪರೀಕ್ಷಾ ವಿಭಾಗದಲ್ಲಿನ ಖರೀದಿಗಳಿಗೆ ಅಳವಡಿಸಿಕೊಳ್ಳುವ ಬಗ್ಗೆ.

**ಚರ್ಚೆ:** ಕುಲಸಚಿವರು (ಮೌಲ್ಯಮಾಪನ)ರವರು ಮಾತನಾಡುತ್ತಾ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ25ಶಾಸನ2019, ಬೆಂಗಳೂರು, ದಿನಾಂಕ: 27-04-2020ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿದೇಯಕ 2020ರನ್ವಯ ಸರಕು ಮತ್ತು ಸೇವೆಗಳ ಸಂಗ್ರಹಣೆ ಮೌಲ್ಯದ ಮಿತಿಯನ್ನು ರೂ.01 ಲಕ್ಷದಿಂದ ರೂ.05 ಲಕ್ಷಗಳವರೆಗೆ ಪರಿಷ್ಕರಿಸಲಾಗಿದೆ. ಇದನ್ನು ಈಗಾಗಲೇ ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಜಾರಿಗೊಳಿಸಿದ್ದು, ಕುವೆಂಪು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ ಅತ್ಯಂತ ತುರ್ತು ಸಂದರ್ಭಗಳಲ್ಲಿ ಮಾತ್ರ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದು ರೂ.5 ಲಕ್ಷಗಳ ಮಿತಿಗೊಳಪಟ್ಟು ದರಪಟ್ಟಿಗಳ ಮುಖಾಂತರ ಮತ್ತು ರೂ.5.00 ಲಕ್ಷಗಳ ಮೇಲ್ಪಟ್ಟ ಯಂತ್ರೋಪಕರಣ/ಉಪಕರಣ ಮುಂತಾದುವುಗಳನ್ನು ಇ-ಟೆಂಡರ್ ಮುಖಾಂತರವೇ ಖರೀದಿಸಲು ಅನುಮೋದನೆಗಾಗಿ ಸಭೆಗೆ ಮಂಡಿಸಲಾಗಿದೆ ಎಂದರು. ಇದನ್ನು ಪರೀಕ್ಷಾ ವಿಭಾಗವೊಂದಕ್ಕೇ ಮಾತ್ರವಲ್ಲದೇ ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳಿಗೆ ಅನ್ವಯಿಸುವಂತೆ ಸದಸ್ಯರು ಸೂಚಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ಕರ್ನಾಟಕ ಸರ್ಕಾರದ ಅಧಿಸೂಚನೆ ಅನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿದೇಯಕ 2020ರನ್ವಯ ಇ-ಟೆಂಡರ್ ಬದಲಾಗಿ ಕೊಟೇಶನ್ ಮೂಲಕ ಸರಕು ಮತ್ತು ಸೇವೆಗಳ ಸಂಗ್ರಹಣೆ ಮೌಲ್ಯದ ಮಿತಿಯನ್ನು ರೂ.01 ಲಕ್ಷದಿಂದ ರೂ.05 ಲಕ್ಷಗಳವರೆಗೆ ಪರಿಷ್ಕರಿಸಲಾಗಿದ್ದು, ಇದನ್ನು ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಸರಕು ಮತ್ತು ಸೇವೆಗಳ ಸಂಗ್ರಹಣೆಯ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳಿಗೆ ಅನ್ವಯಿಸುವಂತೆ ಹಾಗೂ ಸರಕು ಮತ್ತು ಸೇವೆಗಳ ಸಂಗ್ರಹಣೆಯಲ್ಲಿ ಸರ್ಕಾರದ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುವಂತೆ ಸರ್ವಾನುಮತದಿಂದ ನಿರ್ಣಯಿಸಲಾಯಿತು.

**ದಾಸ್ತಾನು ಖರೀದಿ ವಿಭಾಗ**

**2023-ಸಿಂ-2.12** ವಿಶ್ವವಿದ್ಯಾಲಯದ Xerox Machine/ Projector/ Podium/ Interactive White Board ಗಳ ವಾರ್ಷಿಕ ನಿರ್ವಹಣೆಯ ಒಪ್ಪಂದದ (AMC) ಇ-ಟೆಂಡರ್ ಪ್ರಕ್ರಿಯೆ ಅನುಮೋದನೆ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ಎಲ್ಲಾ ವಿಭಾಗ/ಕಛೇರಿಗಳು/ ಸ್ನಾತಕೋತ್ತರ ಕೇಂದ್ರ/ಘಟಕ ಕಾಲೇಜುಗಳಲ್ಲಿರುವ ಶಾರ್ಪ್ ಜೆರಾಕ್ಸ್ ಯಂತ್ರಗಳು, ಪ್ರೊಜೆಕ್ಟರ್/ ಪೋಡಿಯಂ/ ಇಂಟರಾಕ್ಟೀವ್ ವೈಟ್ ಬೋರ್ಡ್‌ಗಳ ವಾರ್ಷಿಕ ನಿರ್ವಹಣೆಯ ದರ ಒಪ್ಪಂದಕ್ಕೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯ ನಡೆಸಿದ ಇ-ಟೆಂಡರ್ ಪ್ರಕ್ರಿಯೆಯನ್ನು ಅಂಗೀಕರಿಸಿದ ಸಭೆಯು ಒಂದು ವರ್ಷದ ಅವಧಿಗೆ ಒಪ್ಪಂದ ಮಾಡಿಕೊಳ್ಳಲು ಹಾಗೂ ಸಂಸ್ಥೆಯ ಸೇವೆಯು ತೃಪ್ತಿಕರವಾಗಿದ್ದಲ್ಲಿ ಇನ್ನೊಂದು ವರ್ಷಕ್ಕೆ ಮುಂದುವರಿಸಲು ಸಭೆಯು ಅನುಮೋದಿಸಿತು.

**ಎಸ್ಟೇಟ್ ವಿಭಾಗ**

**2023-ಸಿಂ-2.13** ಸ್ವಚ್ಛತಾ ಕಾರ್ಯಕ್ಕಾಗಿ ಬೇಕಾಗುವ ಸ್ವಚ್ಛತಾ ಸಾಮಾಗ್ರಿ/ ಇತರೆ ಪರಿಕರಗಳ ಪೂರೈಕೆಗಾಗಿ ಅಲ್ಪಾವಧಿ ಟೆಂಡರ್ ಕರೆದಿರುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಜ್ಞಾನಸಹ್ಯಾದ್ರಿ ಆವರಣ, ಘಟಕ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರಗಳ ಸ್ವಚ್ಛತಾ ಕಾರ್ಯಕ್ಕಾಗಿ ಅಗತ್ಯವಿರುವ ಸಾಮಗ್ರಿಗಳು ಹಾಗೂ ಪರಿಕರಗಳನ್ನು ಖರೀದಿಗಾಗಿ ದರ ಒಪ್ಪಂದ ಮಾಡಿಕೊಳ್ಳಲು ನಡೆಸಲಾದ ಇ-ಟೆಂಡರ್ ಪ್ರಕ್ರಿಯೆಯನ್ನು ಅನುಮೋದಿಸಿದ ಖರೀದಿ ದರ ಒಪ್ಪಂದ ಮಾಡಿಕೊಳ್ಳಲು ನಿರ್ಣಯಿಸಿತು.

**2023-ಸಿಂ-2.14** ವಿಶ್ವವಿದ್ಯಾಲಯದ ಆವರಣದಲ್ಲಿರುವ ಬ್ಯಾಂಕ್‌ನ ಬಾಡಿಗೆ ಪಾವತಿಗೆ ವಿಧಿಸಲಾದ ಷರತ್ತು / ನಿಬಂಧನೆಯನ್ನು ಪರಿಷ್ಕರಿಸುವ ಕುರಿತು.

**ಚರ್ಚೆ:** ವಿಶ್ವವಿದ್ಯಾಲಯದ ಆವರಣದಲ್ಲಿರುವ ವಿದ್ಯಾರ್ಥಿ ಸೌಲಭ್ಯಗಳ ಸಮುಚ್ಛಯದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್, ಜ್ಞಾನಸಹ್ಯಾದ್ರಿ ಶಾಖೆಯ ಮಾಸಿಕ ಬಾಡಿಗೆಯನ್ನು ನವೆಂಬರ್-2022ರ ಮಾಹೆಯಿಂದ ಅನ್ವಯವಾಗುವಂತೆ ರೂ.20,000/-ಗಳಿಗೆ ಹಾಗೂ ಪ್ರತಿ 2 ವರ್ಷಗಳಿಗೊಮ್ಮೆ ಶೇ.25ರಷ್ಟು ಹೆಚ್ಚಳ ಮಾಡಲು ದಿನಾಂಕ:10-11-2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಆದರೆ, ಬ್ಯಾಂಕಿನ ಶಾಖಾ ವ್ಯವಸ್ಥಾಪಕರು ಪತ್ರ ಬರೆದು ಬ್ಯಾಂಕಿನ ನಿಯಮಾವಳಿಗಳ ಪ್ರಕಾರ ವಿಶ್ವವಿದ್ಯಾಲಯದ ಉಳಿದೆಲ್ಲಾ ಷರತ್ತುಗಳನ್ನು ಒಪ್ಪಲಾಗಿದ್ದು, ಗ್ರಾಮಾಂತರ ಪ್ರದೇಶದಲ್ಲಿ ಬಾಡಿಗೆ ಮೊಬಲಗನ್ನು 2 ವರ್ಷಗಳಿಗೊಮ್ಮೆ ಶೇ.8 ರಷ್ಟು ಮಾತ್ರ ಹೆಚ್ಚಿಸಲು ಅವಕಾಶವಿರುವುದರಿಂದ ಇದನ್ನು ಪುನರ್ ಪರಿಶೀಲಿಸಿ ಪರಿಷ್ಕರಿಸುವಂತೆ ಮನವಿ ಮಾಡಿರುವುದನ್ನು ಕುಲಸಚಿವರು ಸಭೆಯ ಅನುಮೋದನೆಗೆ ಮಂಡಿಸಿದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಆವರಣದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್, ಜ್ಞಾನಸಹ್ಯಾದ್ರಿ ಶಾಖೆಯ ಮಾಸಿಕ ಬಾಡಿಗೆಯನ್ನು ಬ್ಯಾಂಕಿನ ನಿಯಮಾವಳಿಯ ಪ್ರಕಾರ ಪ್ರತಿ 2 ವರ್ಷಗಳಿಗೊಮ್ಮೆ ಶೇ.8ರಷ್ಟು ಹೆಚ್ಚಳ ಮಾಡಿ, ಕರಾರು ಒಪ್ಪಂದ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

## ದೂರ ಶಿಕ್ಷಣ ವಿಭಾಗ

**2023–ಸಿಂ–2.15** ದೂ.ಶಿ.ನಿ. ಆನ್‌ಲೈನ್ ಪದವಿ ಕೋರ್ಸ್‌ಗಳಿಗೆ ಅಗತ್ಯವಿರುವ Learners Management System (LMS) ಅಳವಡಿಕೆ ಸಂಬಂಧ ದಿನಾಂಕ:07–02–2023 ರಂದು ನಡೆಸಲಾದ ತಾಂತ್ರಿಕ ತಜ್ಞರುಗಳ ಸಮಿತಿ ಸಭೆಯ ನಡಾವಳಿ ಹಾಗೂ ಸಮಿತಿಯು ನೀಡಿರುವ ಇ-ಟೆಂಡರ್ ಪ್ರಸ್ತಾವನೆ ಹಾಗೂ ಇ–ಟೆಂಡರ್ ಕರೆಯಲು ಅನುಮೋದಿಸುವ ಕುರಿತು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ದಿನಾಂಕ:07–03–2023ರಂದು ನಡೆದಿರುವ ತಾಂತ್ರಿಕ ತಜ್ಞರ ಸಭೆಯಲ್ಲಿ ನಿರ್ಣಯಿಸಿರುವಂತೆ ಇ–ಟೆಂಡರ್‌ಗೆ ಹೋಗುವ ಮುನ್ನ LMS ಗೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯದ ಕನಿಷ್ಟ ಇಬ್ಬರು ತಾಂತ್ರಿಕ ಪರಿಣಿತಿಯುಳ್ಳ ಅರ್ಹ ಸಿಬ್ಬಂದಿಯನ್ನು ಈಗಾಗಲೇ LMS ತಂತ್ರಾಂಶವನ್ನು ಯಶಸ್ವಿಯಾಗಿ ಅಳವಡಿಸಿಕೊಂಡು ನಿರ್ವಹಣೆ ಮಾಡುತ್ತಿರುವ ಒಂದೆರಡು ವಿಶ್ವವಿದ್ಯಾಲಯ/ಶೈಕ್ಷಣಿಕ ಸಂಸ್ಥೆಗಳಿಗೆ ಕಳುಹಿಸಿ, ಸದರಿ ತಂತ್ರಾಂಶ ಅನುಷ್ಠಾನ, ಕಾರ್ಯನಿರ್ವಹಣೆ, ತಾಂತ್ರಿಕ ಮತ್ತು ನಿರ್ವಹಣಾತ್ಮಕ ಅಂಶಗಳನ್ನು End to End ಮಟ್ಟದಲ್ಲಿ ಪರಿಶೀಲಿಸಿ ಅವರಿಂದ ವರದಿ ಪಡೆದುಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ಸೂಕ್ತವಾದ LMS ನ ಪೂರಕವಾದ ಅಂಶಗಳೊಂದಿಗೆ Tender Specification ನ್ನು ಸಿದ್ಧಪಡಿಸಿ ಆಯವ್ಯಯದಲ್ಲಿನ ಅನುದಾನ ಲಭ್ಯತೆ ಆಧರಿಸಿ ಇ–ಟೆಂಡರ್ ಪ್ರಕ್ರಿಯೆ ನಡೆಸಲು ಸಭೆಯು ನಿರ್ಣಯಿಸಿತು.

**2023–ಸಿಂ–2.16** ದೂ.ಶಿ.ನಿ. ಆನ್‌ಲೈನ್ ಪದವಿ ಕೋರ್ಸ್‌ಗಳಿಗೆ ಸಂಬಂಧಿಸಿದ ವಿನಿಯಮಾವಳಿ (Regulations) ಮಾರ್ಪಾಡಿಗೆ ರಚಿಸಲಾಗಿದ್ದ ಡೀನರುಗಳ ಸಮಿತಿ ಸಭೆಯ ನಡಾವಳಿ ಅನುಮೋದಿಸುವ ಕುರಿತು.

**ನಿರ್ಣಯ:** ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಆರಂಭಿಸಿರುವ ಆನ್‌ಲೈನ್ ಪದವಿ ಕೋರ್ಸ್‌ಗಳಿಗೆ ಸಂಬಂಧಪಟ್ಟಂತೆ ಸಿದ್ಧಪಡಿಸಿರುವ ವಿನಿಯಮಾವಳಿ (Regulations) ಗಳಲ್ಲಿ ಎಲ್ಲ ನಿಕಾಯಗಳ ಡೀನರುಗಳನ್ನೊಳಗೊಂಡ ಸ್ಥಾಯೀ ಸಮಿತಿಯ ನಿರ್ಣಯದಂತೆ ಕೆಲವು ಮಾರ್ಪಾಡುಗಳೊಂದಿಗೆ ಪರಿಷ್ಕರಿಸಿ ಮಂಡಿಸಿದ್ದ ವಿನಿಯಮಾವಳಿ (Regulations) ಗಳನ್ನು ಅನುಮೋದಿಸಿದ ಸಭೆಯು, ನಿಯಮಾನುಸಾರ ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಿತು.

**2023–ಸಿಂ–2.17** ದೂ.ಶಿ.ನಿ. ಆನ್‌ಲೈನ್ ಪದವಿ ಕೋರ್ಸ್‌ಗಳ ಶೈಕ್ಷಣಿಕ ಚಟುವಟಿಕೆಗಳ ಅನುಷ್ಠಾನದ ಕುರಿತು ನಡೆಸಲಾದ ದಿನಾಂಕ:20–01–2023 ರ ವಿಭಾಗಾಧ್ಯಕ್ಷರುಗಳು ಮತ್ತು ಅಧ್ಯಯನ ಮಂಡಳಿ ಅಧ್ಯಕ್ಷರುಗಳ ಸಭೆಯ ನಡಾವಳಿ ಹಾಗೂ ಆನ್‌ಲೈನ್ ಪದವಿ ಕೋರ್ಸ್‌ಗಳ 2020–21ರ ಆವೃತ್ತಿಗಳ ಶೈಕ್ಷಣಿಕ ವೇಳಾಪಟ್ಟಿ ಅನುಮೋದಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ದೂರ ಶಿಕ್ಷಣ ನಿರ್ದೇಶನಾಲಯದ ಆನ್‌ಲೈನ್ ಪದವಿ ಕೋರ್ಸ್‌ಗಳ ಶೈಕ್ಷಣಿಕ ಚಟುವಟಿಕೆಗಳ ಅನುಷ್ಠಾನದ ಕುರಿತು ದಿನಾಂಕ:20–01–2023ರಂದು ಸಂಬಂಧಪಟ್ಟ ವಿಭಾಗಾಧ್ಯಕ್ಷರುಗಳು ಮತ್ತು ಅಧ್ಯಯನ ಮಂಡಳಿ ಅಧ್ಯಕ್ಷರುಗಳ ಸಭೆಯನ್ನು ನಡೆಸಲಾಗಿದ್ದು, ಸದರಿ ಸಭೆಯ ನಡಾವಳಿಗಳನ್ನು ಹಾಗೂ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಅಳವಡಿಸಿಕೊಳ್ಳಲಾಗಿದ್ದು, ಅನುಮೋದನೆಗಾಗಿ ಮಂಡಿಸಿದೆ ಎಂದರು. ಸದಸ್ಯರಾದ ಶ್ರೀ ನಿರಂಜನಮೂರ್ತಿರವರು ಮಾತನಾಡುತ್ತಾ, ಓ.ಡಿ.ಎಲ್. ಮೂಲಕ ಈಗಾಗಲೇ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಈವರೆಗೂ ತರಗತಿಗಳನ್ನು ಹಾಗೂ ಪರೀಕ್ಷೆಯನ್ನು ನಡೆಸಿಲ್ಲ. ಇದರಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಈಗ ಮತ್ತೆ ಪ್ರವೇಶ ಪ್ರಕ್ರಿಯೆ ಆರಂಭಿಸಿದ್ದು, ವಿದ್ಯಾರ್ಥಿಗಳಿಗೆ ನೀಡಲು ಹೊಸ ಕಂಟೆಂಟ್ ಸಿದ್ಧವಾಗಿದೆಯೇ ಎಂದರು. ಕುಲಸಚಿವರು ಮಾತನಾಡಿ ಓ.ಡಿ.ಎಲ್.ನಲ್ಲಿ ಕೇವಲ 13 ಕೋರ್ಸ್‌ಗಳು ಮಾತ್ರ ಇದ್ದು, ಇವುಗಳಿಗೆ ಸಂಬಂಧಪಟ್ಟಂತೆ, ಹಳೆಯ ಪಠ್ಯಕ್ರಮನ್ನು ಮಾರ್ಪಡಿಸಿ ಸೆಮಿಸ್ಟರ್ ಸಿಸ್ಟಂಗೆ ಕಂಟೆಂಟ್ ಸಿದ್ಧಪಡಿಸಿ, ಅಧ್ಯಯನ ಮಂಡಳಿಯ ಅನುಮೋದನೆಯಾಗಿದೆ. ಇದನ್ನು ಈಗಾಗಲೇ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ನೀಡಬಹುದಾಗಿದ್ದು, ಪ್ರಸ್ತುತ ಹೊಸದಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ

ಹೊಸ ಕಂಟೆಂಟ್ ನೀಡಬೇಕಾಗುತ್ತದೆ ಎಂದರು. ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥ ರವರು ಮಾತನಾಡುತ್ತಾ, ಶೈಕ್ಷಣಿಕ ಕ್ಷೇತ್ರದಲ್ಲಿ ಇತ್ತೀಚೆಗೆ ಬಹಳ ಬದಲಾವಣೆಗಳಾಗಿದ್ದು, ಅವುಗಳನ್ನು ಅಳವಡಿಸಿಕೊಂಡು ಕಂಟೆಂಟನ್ನು ಸಿದ್ಧಪಡಿಸಿ ಮುಂದೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ನೀಡಬೇಕು. ವಿಶ್ವವಿದ್ಯಾಲಯದ ಸಿದ್ಧಪಡಿಸುವ ಕಂಟೆಂಟ್ ಉತ್ತಮ ಗುಣಮಟ್ಟದ್ದಾಗಿದ್ದು, ನಾಗರೀಕ ಸಮಾಜದಿಂದ ಒಳ್ಳೆಯ ಅಭಿಪ್ರಾಯ ಬರುವಂತಿರಬೇಕು ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳಿ ಎಂದರು. ಸದಸ್ಯರಾದ ಡಾ. ಸಂಧ್ಯಾಕಾವೇರಿರವರು ಮಾತನಾಡಿ, ವಾರದಲ್ಲಿ ಒಂದು ದಿನ ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳಬಹುದು ಎಂದರು.

ಕುಲಸಚಿವರು (ಮೌಲ್ಯಮಾಪನ)ರವರು ಮಾತನಾಡಿ, ಯು.ಜಿ.ಸಿ. ನಿಯಮಗಳನ್ವಯ ಕಂಟೆಂಟ್ ಇಲ್ಲದೆ ಕೋರ್ಸ್‌ಗಳನ್ನು ಆರಂಭಿಸಲು ಅವಕಾಶವಿಲ್ಲ. ಹೊಸ ಕಂಟೆಂಟ್ ಸಿದ್ಧವಾಗಿ, ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಪಡೆದುಕೊಂಡು ಜಾರಿಗೊಳಿಸಲು ಸ್ವಲ್ಪ ಸಮಯವಾಗುತ್ತದೆ. ಆದುದರಿಂದ, ಪ್ರಸ್ತುತ ಪ್ರವೇಶ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಸದ್ಯಕ್ಕೆ ಹಳೆಯ ಕಂಟೆಂಟ್ ಪ್ರಕಾರ ಕೋರ್ಸ್ ನಡೆಸಬಹುದು. ಮುಂದೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಹೊಸ ಕಂಟೆಂಟ್ ನೀಡಬಹುದು ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ಪ್ರಸ್ತುತ ಹಳೆಯ ಕಂಟೆಂಟ್ ಲಭ್ಯವಿದ್ದು, ಹೊಸ ಕಂಟೆಂಟ್ ಸಿದ್ಧವಾಗುತ್ತಿರುವ ಹಿನ್ನೆಲೆಯಲ್ಲಿ, ಹಾಗೂ ಪ್ರವೇಶಗಳು ಯು.ಜಿ.ಸಿ., ನಿಗದಿಪಡಿಸಿರುವ ವೇಳಾಪಟ್ಟಿಯ ಪ್ರಕಾರವೇ ಆಗಬೇಕಾಗಿರುವುದರಿಂದ, ತಕ್ಷಣವೇ ಎಲ್ಲಾ 13 ಕೋರ್ಸ್‌ಗಳ ಅಧ್ಯಕ್ಷರು ಹಾಗೂ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳ ಸಭೆ ಕರೆದು, ಚರ್ಚಿಸಿ, ಹೊಸ ಕಂಟೆಂಟ್ ಸಿದ್ಧವಾಗುವುದಿದ್ದಲ್ಲಿ ಅದನ್ನು ಅನುಷ್ಠಾನಗೊಳಿಸುವುದು. ಹೊಸ ಕಂಟೆಂಟ್ ಸಿದ್ಧವಾಗುವುದು ತಡವಾಗುವುದಿದ್ದಲ್ಲಿ ಹಳೆಯ ಕಂಟೆಂಟ್ ಪ್ರಕಾರ ಪ್ರವೇಶ ನೀಡಲು ಹಾಗೂ ಮುಂದಿನ ಆವೃತ್ತಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಹೊಸ ಕಂಟೆಂಟ್ ನೀಡಲು ಸಭೆಯು ಅನುಮೋದನೆ ನೀಡಿತು. ಉಳಿದಂತೆ, ನಡೆದ ಆನ್‌ಲೈನ್ ಕೋರ್ಸ್‌ಗಳ ಅನುಷ್ಠಾನದ ಕುರಿತು ದಿನಾಂಕ: 20-01-2023ರಂದು ನಡೆದ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2023-ಸಿಂ-2.18** ತುಮಕೂರಿನ ಎಸ್.ಆರ್.ಎಸ್. ಪ್ರಥಮ ದರ್ಜೆ ಕಾಲೇಜು ಕಲಿಕಾರ್ಥಿ ಸೇವಾ ಕೇಂದ್ರವನ್ನು ವಿಶ್ವವಿದ್ಯಾಲಯದ ಪತ್ರ ಸಂ:ಕುವಿ:ಕು.ಸ:ಆಶಾ:172:2022-23 ರಲ್ಲಿ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ರದ್ದುಪಡಿಸಿರುವುದನ್ನು ಘಟನೋತ್ತರ ಅನುಮೋದಿಸುವ ಕುರಿತು.

**ನಿರ್ಣಯ:** ತುಮಕೂರಿನ ಎಸ್.ಆರ್.ಎಸ್. ಪ್ರಥಮ ದರ್ಜೆ ಕಾಲೇಜು ತುಮಕೂರು ವಿಶ್ವವಿದ್ಯಾಲಯದ ಸಂಯೋಜನೆ ಪಡೆಯದಿರುವ ಹಿನ್ನೆಲೆಯಲ್ಲಿ, ಸದರಿ ಕಾಲೇಜಿನಲ್ಲಿದ್ದ ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಕಲಿಕಾರ್ಥಿ ಸೇವಾ ಕೇಂದ್ರವನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ರದ್ದುಪಡಿಸಿದ್ದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ದಾಸ್ತಾನು ಖರೀದಿ ವಿಭಾಗ

**2023-ಸಿಂ-2.19** ವಿಶ್ವವಿದ್ಯಾಲಯದ UPS System & batteries ಗಳ ವಾರ್ಷಿಕ ನಿರ್ವಹಣೆ ದರ ಒಪ್ಪಂದ (AMC) ಸಂಬಂಧದ ಇ-ಟೆಂಡರ್ ಅನುಮೋದನೆ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು, ಘಟಕ ಕಾಲೇಜುಗಳು, ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ಅಳವಡಿಸಿರುವ ಯು.ಪಿ.ಎಸ್. ಸಿಸ್ಟಂ ಮತ್ತು ಬ್ಯಾಟರಿಗಳ ವಾರ್ಷಿಕ ನಿರ್ವಹಣೆಯ ಒಪ್ಪಂದಕ್ಕಾಗಿ ನಡೆಸಲಾದ ಇ-ಟೆಂಡರ್ ಪ್ರಕ್ರಿಯೆಯನ್ನು ಅನುಮೋದಿಸಿದ ಸಭೆಯು, ನಿರ್ವಹಣಾ ಒಪ್ಪಂದ ಮಾಡಿಕೊಳ್ಳಲು ನಿರ್ಣಯಿಸಿತು.

## ಹಣಕಾಸು ವಿಭಾಗ

**2023–ಸಿಂ–2.20** 2023–24ನೇ ಆರ್ಥಿಕ ವರ್ಷದ ಆಯ–ವ್ಯಯ ಅಂದಾಜು ಪರಿಶೀಲನೆ ಮತ್ತು ಅನುಮೋದನೆಗಾಗಿ.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ಈ ಸಭೆಯಲ್ಲಿ ವಿಶ್ವವಿದ್ಯಾಲಯದ 2023–24ನೇ ಸಾಲಿನ ಆಯವ್ಯಯ ಅಂದಾಜು ಹಾಗೂ 2017–18 ಮತ್ತು 2018–19ನೇ ಸಾಲುಗಳ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳಿಗೆ ಸಿದ್ಧಪಡಿಸಿರುವ ಅನುಪಾಲನಾ ವರದಿಗಳನ್ನು ಸಭೆಗೆ ಮಂಡಿಸಬೇಕಾಗಿರುವುದರಿಂದ ಹಣಕಾಸು ಅಧಿಕಾರಿಗಳು ವಿಶೇಷ ಆಹ್ವಾನಿತರಾಗಿ ಸಭೆಯಲ್ಲಿ ಹಾಜರಿದ್ದು, ಅವರು ಮಂಡಿಸುತ್ತಾರೆ ಎಂದರು. ಹಣಕಾಸು ಅಧಿಕಾರಿಗಳು ಮಾತನಾಡುತ್ತಾ ದಿನಾಂಕ:15–03–2023ರಂದು ನಡೆದ ಹಣಕಾಸು ಸಮಿತಿಯ ಸಭೆಯಲ್ಲಿ ಅನುಮೋದನೆಯಾಗಿರುವ ವಿಶ್ವವಿದ್ಯಾಲಯದ 2023–24ನೇ ಸಾಲಿನ ರೂ.244.58 ಲಕ್ಷಗಳ ಕೊರತೆ ಆಯವ್ಯಯವನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿ, ಅನುಮೋದನೆ ನೀಡುವಂತೆ ಕೋರಿದರು. ಸದಸ್ಯರಾದ ಶ್ರೀ. ನಿರಂಜನಮೂರ್ತಿರವರು ಮಾತನಾಡಿ ರೂ.244.58 ಲಕ್ಷಗಳ ಕೊರತೆ ಇದ್ದು, ಇನ್ನೂ ರೂ.500 ಲಕ್ಷಗಳನ್ನು ಸರ್ಕಾರದಿಂದ ನಿರೀಕ್ಷಿತ ಎಂದು ತಿಳಿಸಿರುವಿರಿ. ಸದರಿ, ಅನುದಾನ ಸರ್ಕಾರದಿಂದ ಬಿಡುಗಡೆಯಾಗದಿದ್ದಲ್ಲಿ ಯಾವ ರೀತಿ ಸರಿದೂಗಿಸುತ್ತೀರಿ ಎಂದರು. ಮಾನ್ಯ ಕುಲಪತಿಗಳು ಮಾತನಾಡಿ ದಿನಾಂಕ:15–03–2023ರಂದು ಬೆಂಗಳೂರಿನಲ್ಲಿ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಸಭೆ ನಡೆಸಿದ್ದು, ಸರ್ಕಾರವು ವೇತನ ಭತ್ಯೆಗಳು ಹಾಗೂ ನಿವೃತ್ತಿ ವೇತನದ ಅನುದಾನವನ್ನು ಮಾತ್ರ ಮಂಜೂರು ಮಾಡಿದ್ದು, ಅಭಿವೃದ್ಧಿ ಅನುದಾನ ಹಾಗೂ ಎಸ್.ಸಿ.ಪಿ.,/ಟಿ.ಎಸ್.ಪಿ., ಅನುದಾನ ಒದಗಿಸಿಲ್ಲ. ಅಲ್ಲದೆ, ಅತಿಥಿ ಉಪನ್ಯಾಸಕರ ಗೌರವಧನ ಪರಿಷ್ಕರಣೆಯಿಂದಾಗಿ ವಿಶ್ವವಿದ್ಯಾಲಯದ ಹಣಕಾಸಿನ ಸ್ಥಿತಿಗತಿಯ ಮೇಲೆ ಪರಿಣಾಮ ಬೀರುತ್ತದೆ. ಕಳೆದ ವರ್ಷ ವಾರ್ಷಿಕ ರೂ.6.00 ಕೋಟಿಯಷ್ಟಿದ್ದ ಅತಿಥಿ ಉಪನ್ಯಾಸಕರ ಗೌರವಧನ ಪರಿಷ್ಕರಣೆಯಿಂದಾಗಿ ರೂ.11.00 ಕೋಟಿಗಳಿಗೆ ಹೆಚ್ಚಳವಾಗಿದೆ. ಹೊರಗುತ್ತಿಗೆ ನೌಕರರ ವೇತನಕ್ಕೆ ರೂ.7.00 ಕೋಟಿಗಳಷ್ಟು ವಾರ್ಷಿಕ ವೆಚ್ಚವಾಗುತ್ತದೆ. ಆದುದರಿಂದ, ಅತಿಥಿ ಉಪನ್ಯಾಸಕರ ಗೌರವಧನವನ್ನು ಪರಿಷ್ಕರಿಸಿ ಸರ್ಕಾರಿ ಕಾಲೇಜುಗಳಲ್ಲಿ ನಿಗದಿಪಡಿಸಿರುವಷ್ಟು ನೀಡಬೇಕು ಮತ್ತು ಹೊರ ಗುತ್ತಿಗೆ ನೌಕರರ ಸಂಖ್ಯೆಯನ್ನು ಕಡಿತಗೊಳಿಸಬೇಕಾಗಿದೆ. ಇಲ್ಲವಾದಲ್ಲಿ ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿ ಹದಗೆಡುತ್ತದೆ ಎಂದರು. ಇದೇ ಮೊದಲ ಬಾರಿಗೆ ಪವರ್ ಪಾಯಿಂಟ್ ಮೂಲಕ ಆಯವ್ಯಯವನ್ನು ಅಚ್ಚುಕಟ್ಟಾಗಿ ಮಂಡಿಸಿದ್ದಕ್ಕಾಗಿ ಹಣಕಾಸು ಅಧಿಕಾರಿಯವರನ್ನು ಎಲ್ಲಾ ಸದಸ್ಯರು ಪ್ರಶಂಸಿಸಿದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಅಭಿವೃದ್ಧಿ ಅನುದಾನ ಬಿಡುಗಡೆಯಾಗಿಲ್ಲವಾದ್ದರಿಂದ ಹಾಗೂ ಆಂತರಿಕ ಸಂಪನ್ಮೂಲ ಸಂಗ್ರಹಣೆಯಲ್ಲಿ ಕುಸಿತವಾಗಿರುವ ಹಿನ್ನೆಲೆಯಲ್ಲಿ ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಕಡಿತಗೊಳಿಸಿ ಖಾಲಿ ಇರುವು ಮಂಜೂರಾತಿ ಹುದ್ದೆಗಳಿಗೆ ಸೀಮಿತಿಗೊಳಿಸಲು ಹಾಗೂ ಅತಿಥಿ ಉಪನ್ಯಾಸಕರ ಗೌರವಧನವನ್ನು ಪರಿಷ್ಕರಿಸಿ ಅನುಷ್ಠಾನಗೊಳಿಸಬೇಕೆಂದು ನಿರ್ಣಯಿಸಿದ ಸಭೆಯು ವಿಶ್ವವಿದ್ಯಾಲಯದ 2023–24ನೇ ಸಾಲಿನ ಆಯವ್ಯಯ ಅಂದಾಜನ್ನು ಅನುಮೋದಿಸಿತು.

## ಹೆಚ್ಚುವರಿ ಕಾರ್ಯಸೂಚಿ

## ಹಣಕಾಸು ವಿಭಾಗ

**2023–ಸಿಂ–2.21** 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳಿಗೆ ಸಿದ್ಧಪಡಿಸಿರುವ ಅನುಪಾಲನಾ ವರದಿಗಳ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಸ್ವೀಕೃತವಾದ ವಿಶ್ವವಿದ್ಯಾಲಯದ 2017–18 ಮತ್ತು 2018–19ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳಿಗೆ ಸಿದ್ಧಪಡಿಸಲಾದ ಅನುಪಾಲನಾ ವರದಿಗಳನ್ನು ಸಭೆಯು ಅನುಮೋದಿಸಿತು.

## ಮಾನವ ಸಂಪನ್ಮೂಲ ನಿರ್ವಹಣೆ ವಿಭಾಗ

**2023–ಸಿಂ–2.22** ವೃತ್ತಿ ಪದೋನ್ನತಿ (CAS) ಸಂಬಂಧ BOA ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ಕಲಾ ಕಾಲೇಜಿನ ಅಧ್ಯಾಪಕರಿಗೆ ವೃತ್ತಿ ಪದೋನ್ನತಿಗೆ ಸಂಬಂಧಿಸಿದ ನೇಮಕಾತಿ ಮಂಡಳಿಯ ಸಭೆಯನ್ನು ಯು.ಜಿ.ಸಿ., ಮಾರ್ಗಸೂಚಿಗಳನ್ವಯ ದಿನಾಂಕ:13–03–2023ರಂದು ಏರ್ಪಡಿಸಲಾಗಿದ್ದು, ಬಿ.ಓ.ಎ. ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಈ ಕೆಳಗಿನಂತೆ ಅನುಮೋದಿಸಿತು.

| ಅಧ್ಯಾಪಕರ ಹೆಸರು | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| ಡಾ. ಮಂಜುನಾಥ, ಹೆಚ್.ಪಿ. | ಶಿಕ್ಷಣಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು Level 12 | ಸಹ ಪ್ರಾಧ್ಯಾಪಕರು Level 13(A) | 05–02–2023 |

**2023–ಸಿಂ–2.23** ವೃತ್ತಿ ಪದೋನ್ನತಿ (CAS) ಸಂಬಂಧ Screening cum Evaluation Committee ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಅಧ್ಯಾಪಕರಿಗೆ ವೃತ್ತಿ ಪದೋನ್ನತಿಗೆ ಸಂಬಂಧಿಸಿದ ನೇಮಕಾತಿ ಮಂಡಳಿಯ ಸಭೆಯನ್ನು ಯುಜಿಸಿ ಮಾರ್ಗಸೂಚಿಗಳನ್ವಯ ದಿನಾಂಕ:22–12–2022ರಂದು ಏರ್ಪಡಿಸಲಾಗಿದ್ದು, ಬಿ.ಓ.ಎ. ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಈ ಕೆಳಗಿನಂತೆ ಅನುಮೋದಿಸಿತು.

| ಅಧ್ಯಾಪಕರ ಹೆಸರು | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| ಶ್ರೀಮತಿ ಡೈಸಿ ಜಾಸ್ಮಿನ್ ಜಾರ್ಜ್ | ಕನ್ನಡ | ಸಹಾಯಕ ಪ್ರಾಧ್ಯಾಪಕರು Level 11 | ಸಹಾಯಕ ಪ್ರಾಧ್ಯಾಪಕರು Level 12 | 05–03–2019 |

**2023–ಸಿಂ–2.24** ಡಾ. ಪ್ರಸನ್ನಕುಮಾರ್ ಕೆ., ಪ್ರಾಧ್ಯಾಪಕರು ಇವರನ್ನು ತುಮಕೂರು ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ನಿಯೋಜಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಸರ್ಕಾರದ ಅಧಿಸೂಚನೆ ಸಂಖ್ಯೆ:ಇ–ಕಛೇರಿ ಸಂ:ಇಡಿ 61 ಯುಟಿಟಿ 2020 ಬೆಂಗಳೂರು, ದಿನಾಂಕ:05–01–2023ರನ್ವಯ ತುಮಕೂರು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕಗೊಂಡಿದ್ದ ಡಾ.ಪ್ರಸನ್ನಕುಮಾರ್ ಕೆ., ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇವರನ್ನು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸರ್ಕಾರದ ಅಧಿಸೂಚನೆಯಲ್ಲಿನ ಷರತ್ತುಗಳಿಗೊಳಪಟ್ಟು ನಿಯೋಜಿಸಲು ಅನುಮತಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯಲ್ಲಿ ಅನುಮೋದಿಸಿ ಸ್ಥಿರೀಕರಿಸಲಾಯಿತು.

**2023–ಸಿಂ–2.25** ವೈದ್ಯಕೀಯ ಚಿಕಿತ್ಸಾ ವೆಚ್ಚಗಳ ಮೊತ್ತ ಪಾವತಿಸುವ ಕುರಿತು.

**ನಿರ್ಣಯ:** ಶ್ರೀಮತಿ ಅಂಬಿಕಾ ಎನ್.ಪಿ., ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ ಇವರು ತಮ್ಮ ಮಗಳಿಗೆ ಸರ್ಕಾರದಿಂದ ಅಂಗೀಕೃತಗೊಂಡಿರುವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಾಬ್ತು ವಿಶ್ವವಿದ್ಯಾಲಯದ ವೈದ್ಯಾಧಿಕಾರಿಗಳು ಅಂಗೀಕರಿಸಿರುವ ಮೊಬಲಗು ರೂ.1,66,032/- (ಒಂದು ಲಕ್ಷ ಅರವತ್ತಾರು ಸಾವಿರದ ಮೂವತ್ತೆರಡು ರೂಪಾಯಿಗಳು ಮಾತ್ರ) ಗಳನ್ನು ಮರುಭರಿಕೆ ಮಾಡಲು ಸಭೆಯು ಅನುಮತಿಸಿತು.

2023-ಸಿಂ-2.26 2023-24 ನೇ ಸಾಲಿನಲ್ಲಿ ವಯೋ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ಚರ್ಚೆ:** 2023-24ನೇ ಆರ್ಥಿಕ ವರ್ಷದಲ್ಲಿ ವಿಶ್ವವಿದ್ಯಾಲಯ ಹಾಗೂ ಘಟಕ ಕಾಲೇಜುಗಳ ಈ ಕೆಳಕಂಡ ಅಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ಶಿಕ್ಷಕರು/ಅಧ್ಯಾಪಕೇತರ ನೌಕರರುಗಳು ಯು.ಜಿ.ಸಿ., ನಿಯಮಾವಳಿ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ-95ರ ಪ್ರಕಾರ ವಯೋ-ನಿವೃತ್ತಿ ಹೊಂದಲು ಅನುಮತಿ ನೀಡಲಾಯಿತು.

| ಕ್ರ. ಸಂ | ಹೆಸರು ಮತ್ತು ಹುದ್ದೆ ಡಾ./ಶ್ರೀ/ಶ್ರೀಮತಿ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ವಯೋ ನಿವೃತ್ತಿ ಹೊಂದಲಿರುವ ದಿನಾಂಕ |
|---|---|---|---|---|
| **ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರು** | | | | |
| 1 | ರಿಯಾಜ್ ಅಹಮದ್, ಪ್ರಾಧ್ಯಾಪಕರು | 10-06-1961 | 16-06-1998 | 30-06-2023 |
| 2 | ಸೋಮಶೇಖರ ಜಿ. ಮಾಳಮ್ಮನವರ್, ಸಹ ಪ್ರಾಧ್ಯಾಪಕರು | 20-09-1961 | 25-05-2012 | 30-09-2023 |
| **ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ (ಅಧ್ಯಾಪಕರು)** | | | | |
| 1 | ಧನಂಜಯ. ಕೆ.ಬಿ., ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರು | 25-09-1961 | 20-02-1991 | 30-09-2023 |
| 2 | ವೀಣಾ, ಎಂ.ಕೆ., ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರು | 27-01-1962 | 20-02-1991 | 31-01-2024 |
| **ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ (ಅಧ್ಯಾಪಕರು)** | | | | |
| 1 | ಪಟೇಲ್, ಎಂ.ಇ., ಸಹಾಯಕ ಪ್ರಾಧ್ಯಾಪಕರು | 01-06-1961 | 10-01-2007 | 31-05-2023 |
| 2 | ಡೈಸಿ ಜಾಸ್ಮಿನ್ ಜಾರ್ಜ್ ಸಹಾಯಕ ಪ್ರಾಧ್ಯಾಪಕರು | 15-06-1961 | 08-03-2004 | 30-06-2023 |
| 3 | ರವಿಕುಮಾರ್, ಆರ್., ಸಹಾಯಕ ಪ್ರಾಧ್ಯಾಪಕರು | 28-10-1961 | 10-01-2007 | 31-10-2023 |
| 4 | ಓಂಕಾರಪ್ಪ, ಆರ್., ಸಹಾಯಕ ಪ್ರಾಧ್ಯಾಪಕರು | 03-12-1961 | 16-05-1998 | 31-12-2023 |
| **ಎಸ್.ಎಂ.ಆರ್.ಪ್ರಥಮ ದರ್ಜೆ ಕಾಲೇಜು, ಶಂಕರಘಟ್ಟ (ಅಧ್ಯಾಪಕರು)** | | | | |
| 1 | ಕುಬೇಂದ್ರನಾಯ್ಕ್, ಎಸ್., ಸಹ ಪ್ರಾಧ್ಯಾಪಕರು | 10-12-1963 | 02-11-1988 | 31-12-2023 |
| 2 | ಧರ್ಮೇಗೌಡ, ಹೆಚ್.ಎಂ, ಪ್ರಾಧ್ಯಾಪಕರು | 08-03-1964 | 02-11-1990 | 31-03-2024 |
| **ಅಧ್ಯಾಪಕೇತರ ನೌಕರರು** | | | | |
| 1 | ಕೃಷ್ಣೇಗೌಡ, ಪ್ರಥಮ ದರ್ಜೆ ಸಹಾಯಕ | 23-04-1963 | 03-01-1995 | 30-04-2023 |
| 2 | ವೆಂಕಟೇಶ್ ಜೋಯಿಸ್, ಕ್ಯುರೇಟರ್ | 16-05-1963 | 06-12-1990 | 31-05-2023 |

| | | | | |
|---|---|---|---|---|
| 3 | ಚಿದಾನಂದಮೂರ್ತಿ, ಎಸ್., ಹಿರಿಯ ಸಹಾಯಕ | 15-05-1963 | 08-05-1995 | 31-05-2023 |
| 4 | ಸುಶೀಲಮ್ಮ, ಕೆ., ಹಿರಿಯ ಸಹಾಯಕರು | 01-07-1963 | 01-12-1994 | 30-06-2023 |
| 5 | ಯೂನಸ್ ಸಲೀಂ, ಹಿರಿಯ ಸಹಾಯಕ | 05-06-1963 | 15-05-1995 | 30-06-2023 |
| 6 | ಡಾ. ಶಿವಮೂರ್ತಿ, ಎ., ದೈಹಿಕ ಶಿಕ್ಷಣ ಶಿಕ್ಷಕರು | 20-07-1963 | 05-08-1994 | 31-07-2023 |
| 7 | ಮಂಜುನಾಥ, ಎಸ್., ಲೋಹರ್ ಸಹಾಯಕ ಗ್ರಂಥಪಾಲಕರು (ಆಯ್ಕೆ ಶ್ರೇಣಿ) | 20-07-1963 | 11-02-1993 | 31-07-2023 |
| 8 | ನಾಗರಾಜ್, ಪರಿಚಾರಕರು | 22-07-1963 | 01-07-1987 | 31-07-2023 |
| 9 | ಶಕುಂತಲಬಾಯಿ, ಎಸ್.ಕೆ., ಹಿರಿಯ ಸಹಾಯಕರು | 09-09-1963 | 02-12-1994 | 30-09-2023 |
| 10 | ವಸಂತಕುಮಾರ ಬಿ.ಎ ಶಾಖಾಧಿಕಾರಿ | 22-10-1963 | 03-01-1990 | 31-10-2023 |
| 11 | ಉಮೇಶ, ಪಿ.ಜಿ., ಹಿರಿಯ ಸಹಾಯಕರು | 20-02-1964 | 08-05-1995 | 29-02-2024 |
| 12 | ಪ್ರಸನ್ನ, ಎನ್., ಹಿರಿಯ ಸಹಾಯಕರು | 02-02-1964 | 29-08-1994 | 29-02-2024 |
| 13 | ಪುಟ್ಟೇಗೌಡ, ಹೆಚ್.ಎ., ಹಿರಿಯ ಸಹಾಯಕರು | 04-03-1964 | 06-05-1995 | 31-03-2024 |

**2023-ಸಿಂ-2.27** ವೈದ್ಯಕೀಯ ಚಿಕಿತ್ಸಾ ವೆಚ್ಚದ ಮೊತ್ತ ಪಾವತಿಸುವ ಕುರಿತು.

**ನಿರ್ಣಯ:** ಡಾ. ಪೂರ್ಣನಂದ ಡಿ.ಎಸ್., ನಿವೃತ್ತ ಪ್ರಾಧ್ಯಾಪಕರು, ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಂಹವನ ಅಧ್ಯಯನ ವಿಭಾಗ, ಇವರು ತಮ್ಮ ಸೇವಾ ಅವಧಿಯಲ್ಲಿ ಸರ್ಕಾರ/ ವಿಶ್ವವಿದ್ಯಾಲಯದ ಅನುಮೋದಿತ ಆಸ್ಪತ್ರೆಯಲ್ಲಿ ಹೃದ್ರೋಗ ಶಸ್ತ್ರಚಿಕಿತ್ಸೆಗೆ ಒಳಗಾದ ಬಗ್ಗೆ ಸಲ್ಲಿಸಿದ್ದ ವೈದ್ಯಕೀಯ ಚಿಕಿತ್ಸೆ ಬಿಲ್ಲಿನಲ್ಲಿ ವಿಶ್ವವಿದ್ಯಾಲಯದ ವೈದ್ಯಾಧಿಕಾರಿಗಳು ಅಂಗೀಕರಿಸಿದ ಮೊಬಲಗು ರೂ.1,43,921/-ಗಳನ್ನು ಪಾವತಿಸಲು ಸಭೆಯು ಅನುಮೋದಿಸಿತು.

**2023-ಸಿಂ-2.28** ವೈದ್ಯಕೀಯ ಚಿಕಿತ್ಸಾ ವೆಚ್ಚಗಳ ಮೊತ್ತ ಪಾವತಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಧ್ಯಾಪಕೇತರ ನೌಕರರು ಸರ್ಕಾರದಿಂದ ಅಂಗೀಕೃತಗೊಂಡ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದ ಬಾಬ್ತು ಈ ವಿಶ್ವವಿದ್ಯಾಲಯದ ವೈದ್ಯಾಧಿಕಾರಿಗಳು ಅಂಗೀಕರಿಸಿರುವ ಮೊತ್ತವನ್ನು ಈ ಕೆಳಗಿನಂತೆ ಪಾವತಿಸಲು ಸಭೆಯು ಅನುಮೋದನೆ ನೀಡಿತು.

| | | |
|---|---|---|
| 01 | ಶ್ರೀ ಬಸವರಾಜ ತಾಂತ್ರಿಕ ಸಹಾಯಕರು, ಪರೀಕ್ಷಾ ವಿಭಾಗ | ರೂ. 2,01,640/- |
| 02 | ಶ್ರೀ ಮಂಜುನಾಥ, ಕೆ., ಪ್ರಥಮ ದರ್ಜೆ ಸಹಾಯಕರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ. | 1,98,478/- |
| 03 | ಶ್ರೀ ದಿವಾಕರ, ಎನ್., ಅಟೆಂಡರ್, ಎಸ್.ಪಿ.ಡಿ., ವಿಭಾಗ | 2,27,660/- |

2 .3-ಸಿಂ-2.28(1) ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ವಿಭಾಗದಲ್ಲಿ ಹೊರಗುತ್ತಿಗೆ ಮೂಲಕ ಕಾರ್ಯ ನಿರ್ವಹಿಸುತ್ತಿರುವ ವಾಟರ್ ಸಪ್ಲೇರ್ ಹಾಗೂ ಎಲೆಕ್ಟ್ರಿಷಯನ್ಸ್ (ವಿದ್ಯುತ್‌ಚ್ಛಕ್ತಿ ನಿರ್ವಹಣಾ ಸಿಬ್ಬಂದಿಗಳಿಗೆ) ವೇತನ ಪರಿಷ್ಕರಣೆ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ವಿಭಾಗದಲ್ಲಿ ಹೊರಗುತ್ತಿಗೆ ಮೂಲಕ ಕರ್ತವ್ಯ ನಿರ್ವಹಿಸುತ್ತಿರುವ ವಾಟರ್‌ಸಪ್ಲೈ ಹಾಗೂ ಎಲೆಕ್ಟ್ರಿಕಲ್ ವಿಭಾಗಗಳಲ್ಲಿನ ನೌಕರರು ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳು/ ಕಛೇರಿಗಳು/ ವಸತಿಗೃಹಗಳು/ ವಿದ್ಯಾರ್ಥಿ ನಿಲಯಗಳು ಸೇರಿದಂತೆ ವಿವಿಧ ಸ್ಥಳಗಳಲ್ಲಿ ಹಾಗೂ ಕೆಲವು ಅಪಾಯಕಾರಿ ಸ್ಥಳಗಳಲ್ಲಿ ಕೂಡ ಕೆಲಸ ನಿರ್ವಹಿಸುತ್ತಿದ್ದಾರೆ. ಇವರನ್ನು ಹೊರತುಪಡಿಸಿ ಹೊರಗುತ್ತಿಗೆಯ ಬೇರೆ ನೌಕರರುಗಳು ಪ್ರತಿದಿನ 7-8 ಗಂಟೆಗಳ ಅವಧಿಯ ಕರ್ತವ್ಯ ನಿರ್ವಹಿಸುತ್ತಿದ್ದು, ಎಲ್ಲಾ ಸಾರ್ವತ್ರಿಕ ರಜಾ ದಿನಗಳಂದು ಇವರಿಗೂ ರಜೆ ಇರುತ್ತದೆ. ಆದರೆ, ವಾಟರ್‌ಸಪ್ಲೈ ಹಾಗೂ ಎಲೆಕ್ಟ್ರಿಕಲ್ ನೌಕರರು ಸಮಯದ ಮಿತಿಯಿಲ್ಲದೇ, ಹಗಲು-ರಾತ್ರಿ ಹಾಗೂ ಸರ್ಕಾರಿ ರಜಾ ದಿನಗಳೂ ಸೇರಿದಂತೆ ವಾರವಿಡೀ ಕರ್ತವ್ಯ ನಿರ್ವಹಿಸುತ್ತಾರೆ. ಇವರ ಸೇವೆಯು ವಿಶ್ವವಿದ್ಯಾಲಯದಲ್ಲಿ ಅತ್ಯಾವಶ್ಯಕ ಸೇವೆಯಾಗಿರುತ್ತದೆ. ಸದರಿ ನೌಕರರು ಮನವಿ ಸಲ್ಲಿಸಿ ಇತರೆ ಸಿ ಮತ್ತು ಡಿ ಗ್ರೂಪ್ ನೌಕರರಿಗೆ ನೀಡುತ್ತಿರುವಂತೆ ತಮಗೂ ವೇತನ ನೀಡಲಾಗುತ್ತಿದ್ದು, ನಮ್ಮದು ಅತ್ಯಾವಶ್ಯಕ ಸೇವೆಯಾಗಿರುವ ಹಿನ್ನೆಲೆಯಲ್ಲಿ ಹೆಚ್ಚಿನ ವೇತನ ನೀಡುವಂತೆ ಕೋರಿದ್ದಾರೆ.

ಪರಿಶೀಲಿಸಲಾಗಿ, 2015ರ ಕರ್ನಾಟಕ ಅಧಿನಿಯಮ ಸಂಖ್ಯೆ:25, ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ, 2013ರಲ್ಲಿನ ಪ್ರಕರಣ 2(ಎ) ರಲ್ಲಿ "ಅತ್ಯಾವಶ್ಯಕ ಸೇವೆ" ಯ ಕುರಿತಾಗಿ, ಪ್ರಕರಣ 2(i) ರಲ್ಲಿ "ಜಲ ಅಥವಾ ಸಂದರ್ಭಾನುಸಾರವಾಗಿ ವಿದ್ಯುಚ್ಛಕ್ತಿಯ ತಯಾರಿಕೆ, ಉತ್ಪಾದನೆ, ಶೇಖರಣೆ, ಸಾಗಣೆ, ಸರಬರಾಜು ಅಥವಾ ವಿತರಣೆಗೆ ಸಂಬಂಧಪಟ್ಟ ಯಾವುದೇ ಸೇವೆ" ಎಂದಿರುತ್ತದೆ.

ಮುಂದುವರೆದು, ಇದೇ ಅಧಿನಿಯಮದ ಪ್ರಕರಣ-2(iii) ರ ಪ್ರಕಾರ ಅತ್ಯಾವಶ್ಯಕ ಸೇವೆ ಎಂದರೆ "ಸಮುದಾಯದ ಜೀವನಕ್ಕೆ ಅವಶ್ಯವಾದ ಸರಬರಾಜುಗಳನ್ನು ಹಾಗೂ ಸೇವೆಯನ್ನು ನಿರ್ವಹಿಸಿಕೊಂಡು ಬರುವುದಕ್ಕೆ ತೊಂದರೆ ಉಂಟಾಗುತ್ತದೆ ಅಥವಾ ಸಮುದಾಯವನ್ನು ಬಹಳ ಕಷ್ಟಕ್ಕೆ ಈಡು ಮಾಡುತ್ತದೆ ಎಂದು ಸರ್ಕಾರವು ಅಭಿಪ್ರಾಯ ಪಡುತ್ತದೋ ಅಂಥ ಯಾವುದೇ ಇತರ ಸೇವೆ ಅಥವಾ ಉದ್ಯೋಗ ಅಥವಾ ಅವುಗಳ ಯಾವುದೇ ಒಂದು ವರ್ಗವನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಅತ್ಯಾವಶ್ಯಕ ಸೇವೆ ಎಂದು ಅಧಿಸೂಚನೆಯ ಮೂಲಕ ಘೋಷಿಸಬಹುದು" ಎಂದಿರುತ್ತದೆ.

ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಕಾಇ 105 ಎಲ್‌ಡಬ್ಲೂಎ 2022, ಬೆಂಗಳೂರು ದಿನಾಂಕ: 01-09-2022ರಲ್ಲಿನ ಕ್ರಮ ಸಂಖ್ಯೆ-6ರಲ್ಲಿ "ಹೊರಗುತ್ತಿಗೆ ಆಧಾರದಲ್ಲಿ ನೇಮಕಗೊಂಡ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನೀಡುವ ಬಗ್ಗೆ ವಿರಾಮವೂ ಒಳಗೊಂಡಂತೆ ಒಂದು ದಿನಕ್ಕೆ ಎಂಟು ಗಂಟೆಗಳ ಕೆಲಸಕ್ಕಾಗಿ ಕನಿಷ್ಠ ವೇತನವಿದ್ದು, ಎಂಟು ತಾಸಿಗಿಂತಲೂ ಹೆಚ್ಚಿನ ಕೆಲಸಕ್ಕಾಗಿ ಹೆಚ್ಚುವರಿ ಭತ್ಯೆಯನ್ನು ಘಂಟೆಯು ಹೆಚ್ಚಾದಂತೆ ದ್ವಿಗುಣ ದರದಲ್ಲಿ ನೀಡುವುದು. ವೇತನವನ್ನು ಲೆಕ್ಕ ಹಾಕುವಾಗ ಮಾಹೆಯ 4 ರಜಾ ದಿನಗಳನ್ನೂ ಕೂಡ ಪರಿಗಣಿಸತಕ್ಕದ್ದು" ಎಂದಿರುತ್ತದೆ.

ಮೇಲ್ಕಂಡ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ವಿಭಾಗದಲ್ಲಿ ಅತ್ಯಾವಶ್ಯಕವಾದ ವಾಟರ್‌ಸಪ್ಲೈ ಹಾಗೂ ಎಲೆಕ್ಟ್ರಿಕಲ್ ಸಲ್ಲಿಸುತ್ತಿರುವ ನೌಕರರಿಗೆ ಹೆಚ್ಚಿನ ವೇತನ ನೀಡುವ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಸಿರುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು. ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ, ಇವರಿಗೆ ವೇತನ ಹೆಚ್ಚಿಸಿದಲ್ಲಿ ಹೊರಗುತ್ತಿಗೆಯ ಇತರೆ ನೌಕರರು ಕೂಡ ತಮಗೂ ವೇತನ ಹೆಚ್ಚಿಸುವಂತೆ ಕೇಳಬಹುದು, ಹಾಗಾದಲ್ಲಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗುತ್ತದೆ ಎಂದರು. ಕುಲಸಚಿವರು ಮಾಹಿತಿ ನೀಡಿ ಮಾತನಾಡುತ್ತಾ, ವಾಟರ್‌ಸಪ್ಲೈ ಹಾಗೂ ಎಲೆಕ್ಟ್ರಿಕಲ್ ವಿಭಾಗದ ಹೊರಗುತ್ತಿಗೆ ನೌಕರರು

ಅತ್ಯಾವಶ್ಯಕ ಸೇವೆಯಡಿಯಲ್ಲಿ ಬರುವುದರಿಂದ ಹಾಗೂ ಅವರ ಕೆಲಸಕ್ಕೆ ನಿಗದಿತ ಸಮಯ ಇರುವುದಿಲ್ಲವಾದ್ದರಿಂದ ಮತ್ತು ಈ ಹಿಂದೆ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಲ್ಯಾಬ್ ಟೆಕ್ನೀಷಿಯನ್, ಫಾರ್ಮಾಸಿಸ್ಟ್ ಮತ್ತು ನರ್ಸ್‌ಗಳಿಗೆ ದಿನಾಂಕ: 08-10-2020ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದ ಮೇರೆಗೆ ಮಾಹೆಯಾನ ರೂ.5000/-ಗಳನ್ನು ಹೆಚ್ಚುವರಿಯಾಗಿ ನೀಡುತ್ತಿದ್ದು, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಇವರಿಗೂ ನೀಡಬಹುದಾಗಿದೆ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಾಟರ್‌ಸಪ್ಲೈ ಹಾಗೂ ಎಲೆಕ್ಟ್ರಿಕಲ್ ವಿಭಾಗದ ಹೊರಗುತ್ತಿಗೆ ನೌಕರರು ಅತ್ಯಾವಶ್ಯಕ ಸೇವೆಯಡಿಯಲ್ಲಿ ಬರುವುದರಿಂದ ಹಾಗೂ ಅವರ ಕೆಲಸಕ್ಕೆ ನಿಗದಿತ ಸಮಯ ಇರುವುದಿಲ್ಲವಾದ್ದರಿಂದ ಅವರುಗಳಿಗೆ ಪ್ರಸ್ತುತ ಪಡೆಯುತ್ತಿರುವ ವೇತನದ ಜೊತೆಗೆ ಯಾವುದೇ ಕಟಾವಣೆಗಳಿಲ್ಲದೆ ಪ್ರತಿ ಮಾಹೆ ರೂ.5,000/-ಗಳನ್ನು ವಿಶ್ವವಿದ್ಯಾಲಯದ "ಆಸರೆ" ಶೀರ್ಷಿಕೆಯಿಂದ ಭರಿಸಿ, ಏಪ್ರಿಲ್-2023ರ ಮಾಹೆಯಿಂದ ಅನ್ವಯವಾಗುವಂತೆ ಪಾವತಿಸಲು ಸಭೆಯು ನಿರ್ಣಯಿಸಿತು.

**2023-ಸಿಂ-2.28(2)** ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಈ ಹಿಂದೆ ವಿಶ್ವವಿದ್ಯಾಲಯದಲ್ಲಿ ಕಿರಿಯ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀಮತಿ ಕೆ.ಎಲ್.ರಮಾಮಣಿರವರು ಸೇವೆಯಲ್ಲಿರುವಾಗಲೇ ದಿನಾಂಕ: 30-08-2015ರಂದು ನಿಧನ ಹೊಂದಿರುತ್ತಾರೆ. ಅವರ ವಿವಾಹಿತ ಮಗಳಾದ ಶ್ರೀಮತಿ ಡಿ.ಎ.ಶ್ವೇತಾ ಇವರು ದಿನಾಂಕ:26-04-2016ರಂದು ಅರ್ಜಿ ಸಲ್ಲಿಸಿ, ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವಂತೆ ಕೋರಿರುತ್ತಾರೆ. ಆದರೆ, ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಮಗಳು, 1996ರನ್ವಯ ವಿವಾಹಿತಿ ಹೆಣ್ಣುಮಕ್ಕಳಿಗೆ ಉದ್ಯೋಗ ನೀಡಲು ಅವಕಾಶವಿರಲಿಲ್ಲವಾದ್ದರಿಂದ ಸರ್ಕಾರಕ್ಕೆ ಪತ್ರಿಸಲಾಗಿತ್ತು. ಸರ್ಕಾರ ಕೂಡ ಅವಕಾಶವಿಲ್ಲವೆಂದು ನಿರ್ದೇಶನ ನೀಡಿರುತ್ತದೆ. ನಂತರದಲ್ಲಿ, ಶ್ರೀಮತಿ ರಮಾಮಣಿಯವರ ಮಗನಾದ ಶ್ರೀ ಡಿ.ಎ. ಶಶಿಕಿರಣ್ ಇವರು ಅನುಕಂಪದ ಆಧಾರಿದ ನೌಕರಿ ನೀಡುವಂತೆ ದಿನಾಂಕ:04-04-2019ರಂದು ಅರ್ಜಿ ಸಲ್ಲಿಸಿದ್ದರು. ಆದರೆ, ಅವರಿಗೆ ವಯೋಮಿತಿ ಮೀರಿರುವುದಿರಂದ ಸರ್ಕಾರದ ನಿಯಮಗಳಡಿ ಅವಕಾಶವಿಲ್ಲವೆಂದು ದಿನಾಂಕ:04-05-2019ರಲ್ಲಿ ಹಿಂಬರಹ ನೀಡಲಾಗಿದೆ.

ನಂತರದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸಂಇ 26 2018, ದಿನಾಂಕ: 04-04-2021ರ ಅನ್ವಯ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವಂತೆ ಶ್ರೀಮತಿ ಡಿ.ಎ.ಶ್ವೇತಾರವರು ಮತ್ತೊಮ್ಮೆ ದಿನಾಂಕ:24-11-2021ರಂದು ಮನವಿ ಸಲ್ಲಿಸಿರುತ್ತಾರೆ. ಈ ಕುರಿತು ಕಾನೂನು ಅಭಿಪ್ರಾಯ ಕೋರಲಾಗಿದ್ದು, ಕರ್ನಾಟಕ ನಾಗರೀಕ ಸೇವೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ರಲ್ಲಿ ತಿದ್ದುಪಡಿಯಾಗಿದ್ದು, ಸದರಿ ತಿದ್ದುಪಡಿಯು ದಿನಾಂಕ:19-04-2021ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ. ಈ ನಿಯಮಗಳು ಆ ದಿನಾಂಕದಿಂದ ಜಾರಿಗೆ ಬರುತ್ತವೆ. ಯಾವುದೇ ಸರ್ಕಾರದ ಆದೇಶದಲ್ಲಿನ ನಿಯಮವು ಭವಿಷ್ಯವರ್ತಿಯಾಗಿ ಮಾತ್ರ ಜಾರಿಗೆ ಬರುತ್ತದೆಯೇ ಹೊರತು ಪೂರ್ವಾನ್ವಯವಾಗಿ ಬರಲು ಸಾಧ್ಯವಿಲ್ಲವೆಂದು ಅಭಿಪ್ರಾಯ ನೀಡಿರುವ ಮೇರೆಗೆ ಮನವಿಯನ್ನು ಪುರಸ್ಕರಿಸಲು ಸಾಧ್ಯವಿಲ್ಲವೆಂದು ದಿನಾಂಕ: 05-05-2022ರಂದು ಶ್ರೀಮತಿ ಡಿ.ಎ.ಶ್ವೇತಾರವರಿಗೆ ಮತ್ತೊಮ್ಮೆ ಹಿಂಬರಹ ನೀಡಲಾಗಿದ್ದು, ಆದಾಗ್ಯೂ ಅವರು ಮತ್ತೊಮ್ಮೆ ಉದ್ಯೋಗ ನೀಡುವಂತೆ ಅರ್ಜಿ ಸಲ್ಲಿಸಿರುವುದರಿಂದ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಮತ್ತೊಮ್ಮೆ ಸೇವಾ ವಿಷಯಗಳ ತಜ್ಞರು ಅಥವಾ ಕಾನೂನು ತಜ್ಞರಿಂದ ಈ ಕುರಿತು ಅಭಿಪ್ರಾಯ ಪಡೆಯುವಂತೆ ಸಭೆಯು ನಿರ್ಣಯಿಸಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

2023–ಸಿಂ–2.29 ಸತ್ಯ ಶೋಧನಾ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸುವ ಬಗ್ಗೆ.

ನಿರ್ಣಯ: ಹೆಬ್ಬೂರು ಮಹಾವಿದ್ಯಾಲಯ ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿಯ ಕುರಿತು ಬಂದಿರುವ ದೂರುಗಳನ್ನು ಪರಿಶೀಲಿಸಿ ವರದಿ ನೀಡಲು ವಿಶ್ವವಿದ್ಯಾಲಯವು ನೇಮಿಸಿದ್ದ ಸಮಿತಿಯು ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ ಮುಚ್ಚಿದ ಲಕೋಟೆಯಲ್ಲಿ ನೀಡಿದ್ದ ವರದಿಯನ್ನು ಸಭೆಯಲ್ಲಿ ತೆರೆದ ಕುಲಸಚಿವರು ವರದಿಯಲ್ಲಿನ ಶಿಫಾರಸ್ಸುಗಳನ್ನು ಸಭೆಗೆ ವಿವರಿಸಿದರು. ಸಭೆಯು ವರದಿಯನ್ನು ಅಂಗೀಕರಿ, ಸಮಿತಿಯ ಶಿಫಾರಸ್ಸುಗಳನ್ವಯ ಕ್ರಮವಹಿಸಲು ನಿರ್ಣಯಿಸಿತು.

**ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

ನಿರ್ಣಯ: **ಯಾವುದೂ ಇಲ್ಲ**

2023–ಸಿಂ–2.30 **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

2023–ಸಿಂ–2.30(1) ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಬಸವ, ಬುದ್ಧ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗಳ ಕುರಿತು ರಚಿಸಲಾಗಿದ್ದ ಸಮಿತಿಯಲ್ಲಿದ್ದ ಸಿಂಡಿಕೇಟ್ ಸದಸ್ಯರುಗಳ ಅವಧಿ ಮುಕ್ತಾಯಗೊಂಡಿದ್ದು, ಶ್ರೀ ಬಿ. ನಿರಂಜನಮೂರ್ತಿ ಹಾಗೂ ಶ್ರೀ ಎನ್.ಆರ್. ಮಂಜುನಾಥ ಇವರುಗಳನ್ನು ಸೇರ್ಪಡೆಗೊಳಿಸಿ ಪರಿಷ್ಕೃತ ಸಮಿತಿ ರಚಿಸಲು ಸಭೆಯು ನಿರ್ಣಯಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**

ಸಹಿ/–
ಕುಲಪತಿಗಳು